# ಸುದ್ದಿ ಸಂಚಯ



ಬೆಂಗಳೂರಿನ ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದಲ್ಲಿ ನಡೆದ ಪರೆರೋಗ ತಪಾಸಣೆ ಶಿಬಿರದ ದೃಶ್ಯ

## ಅಲಸೂರಿನ ವಿವೇಕಾನಂದ ಆಶ್ರಮದಲ್ಲಿನ ವಿಶೇಷ ಕಾರ್ಯಕ್ರಮಗಳು

ಬೆಂಗಳೂರಿನ ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದ ಆಶ್ರಯದಲ್ಲಿ ತಜ್ಞವೈದ್ಯರಿಂದ ಉಚಿತ ಪರೆರೋಗ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು. ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ, ಜಿ.ಇ.ಎಫ್. ಕಣ್ಣಿನ ಆಸ್ಪತ್ರೆ, ಹೊಸಕೋಟೆ ಮತ್ತು ಮಿಂಟೋ ಕಣ್ಣಿನ ಆಸ್ಪತ್ರೆ, ಇವರ ಸಹಯೋಗದಲ್ಲಿ ಸೆಪ್ಟೆಂಬರ್ ೧೬ನೇ ತಾರೀಖಿನಂದು ೧೮೦ ಜನರಿಗೆ ತಪಾಸಣೆ ನಡೆಸಲಾಯಿತು. ಅವರಲ್ಲಿ ೫೯ ಜನ ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆಯ ಲಾಭವನ್ನು ಪಡೆದರು.

ಸೆಪ್ಟೆಂಬರ್ ೧೨ರ ಭಾನುವಾರದಂದು ೩೦೦ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಆಶ್ರಮದ ಆವರಣದಲ್ಲಿ ಚಿತ್ರಕಲಾ ಪರೀಕ್ಷೆಯನ್ನು ನಡೆಸಲಾಯಿತು. ಉತ್ತಮಾಂಕ ಪಡೆದ ಅಭ್ಯರ್ಥಿಗಳಿಗೆ ಬಹುಮಾನ ವಿತರಣೆಯೂ ಕಾರ್ಯಕ್ರಮದ ಅಂಗವಾಗಿತ್ತು.

ನವರಾತ್ರಿಯ ಪ್ರಯುಕ್ತ ಸೆಪ್ಟೆಂಬರ್ ೨೯ರಿಂದ ಅಕ್ಟೋಬರ್ ೨ರವರೆಗೆ ಪ್ರತಿದಿನ ಸಂಜೆ ೬ರಿಂದ ೮ ಗಂಟೆಯವರೆಗೆ ನುರಿತ ವಿದ್ವಾಂಸರಿಂದ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ದುರ್ಗಾಪೂಜೆಯ ಅಂಗವಾಗಿ ಅಕ್ಟೋಬರ್ ೪ರ ಸಪ್ತಮಿಯಂದು ಬೆಳಗ್ಗೆ ಪೂಜೆ, ಚಂಡೀಹೋಮ, ಅಷ್ಟಮಿಯಂದು ದುರ್ಗಾಹೋಮ ಹಾಗೂ ನವಮಿಯಂದು ಪುಷ್ಪಾಂಜಲಿ ಹಾಗೂ ಸಂಗೀತೋತ್ಸವ ಕಾರ್ಯಕ್ರಮಗಳು ಜರುಗಿದವು.

ಅಷ್ಟೇ ಅಲ್ಲದೆ ಅಕ್ಟೋಬರ್ ೧೧ರಿಂದ ೧೭ರವರೆಗೆ ಆಶ್ರಮವು ಜೆ.ಪಿ. ನಗರದ SSMRV ಕಾಲೇಜಿನಲ್ಲಿ ಸ್ವಾಮಿ ಪುರುಷೋತ್ತಮಾನಂದಜಿಯವರಿಂದ ಭಗವದ್ಗೀತಾ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಎಲ್ಲ ಕಾರ್ಯಕ್ರಮಗಳಲ್ಲೂ ಅಧಿಕ ಸಂಖ್ಯೆಯಲ್ಲಿ ಭಕ್ತಜನರು ಪಾಲ್ಗೊಂಡಿದ್ದರು.

## ರಾಮಕೃಷ್ಣ ಮಿಷನ್ನಿನಿಂದ ಪಶ್ಚಿಮ ಬಂಗಾಳ ರಾಜ್ಯದಲ್ಲಿ ನೆರೆ ಪರಿಹಾರ ಕಾರ್ಯ

### ೬ ಲಕ್ಷಕ್ಕೂ ಹೆಚ್ಚು ಸಂತ್ರಸ್ತರಿಗೆ ನೆರವು

ಅಕ್ಟೋಬರ್ ತಿಂಗಳಿನಲ್ಲಿ ನೆರೆಹಾವಳಿಯಿಂದ ಪಶ್ಚಿಮ ಬಂಗಾಲ ರಾಜ್ಯ ತತ್ತರಿಸಿತು . ರಾಜ್ಯದ ಹಲವಾರು ಕಡೆ ಭಾರೀ ಮಳೆ ಮತ್ತು ಪ್ರವಾಹಗಳಿಂದಾಗಿ ಲಕ್ಷಾಂತರ ಮಂದಿ ಆಶ್ರಯ ಆಸ್ತಿ ಕಳೆದುಕೊಂಡು ನಿರ್ಗತಿಕರಾದ ಭೀಕರ ಸನ್ನಿವೇಶ ಒದಗಿ ಬಂದಿತ್ತು. ಬೇಲೂರು ಮಠದಲ್ಲಿನ ರಾಮಕೃಷ್ಣ ಸಂಘದ ಪ್ರಧಾನ ಕೇಂದ್ರದ ಪರಿಹಾರ ವಿಭಾಗ ಕ್ಷಿಪ್ರ ಗತಿಯಲ್ಲಿ ನೆರೆ ಪರಿಹಾರ ಕಾರ್ಯವನ್ನು ಆರಂಭಿಸಿತು.

ಆ ರಾಜ್ಯದಲ್ಲಿರುವ ರಾಮಕೃಷ್ಣ ಮಿಷನ್ನಿನ ೧೮ ಕೇಂದ್ರಗಳ ಮೂಲಕ ೯ ಸಂತ್ರಸ್ತ ಜಿಲ್ಲೆಗಳಲ್ಲಿ, ೭೨ ಪರಿಹಾರ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಅಕ್ಟೋಬರ್ ಮಧ್ಯಭಾಗದವರೆಗೆ ಬಂದ ವರದಿಯಂತೆ, ೫,೯೫,೧೮೫ ಸಂತ್ರಸ್ತರಿಗೆ ಅವಲಕ್ಕಿ, ಬೆಲ್ಲ, ಬ್ರೆಡ್‌ಮಂತಾದ ತಿನಿಸುಗಳನ್ನು ಒದಗಿಸಲಾಗಿದೆ.ಹಾಗೂ ೬,೯೪,೨೪೪ ಸಂತ್ರಸ್ತರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಇದಕ್ಕಾಗಿ ಇದುವರೆಗೂ, ೩೭.೪೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.ಈ ಪ್ರಾಥಮಿಕ ಪರಿಹಾರ ಕಾರ್ಯ ಇನ್ನೂ ಮುಂದುವರೆಯುತ್ತಿದೆ.

## ಆಶ್ರಮದ ವಿಶೇಷ ಕಾರ್ಯಕ್ರಮಗಳು

### ಡಿಸೆಂಬರ್

| | | |
|---|---|---|
| 05 | ಮಂಗಳವಾರ | ಸ್ವಾಮಿ ಪ್ರೇಮಾನಂದ ಜಯಂತಿ |
| 17 | ಭಾನುವಾರ | ಶ್ರೀ ಶಾರದಾದೇವಿ ಜಯಂತಿ |
| 21 | ಗುರುವಾರ | ಸ್ವಾಮಿ ಶಿವಾನಂದ ಜಯಂತಿ |
| 24 | ಭಾನುವಾರ | ಕ್ರಿಸ್‌ಮಸ್ ಈವ್ |

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ